# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 421(426) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19.02.2024 |

<table>
<tr><th>ಕ್ರಮ. ಸಂಖ್ಯೆ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಬೆಂಗಳೂರು ನಗರ ವ್ಯಾಪ್ತಿಯ ಜಿಲ್ಲೆಗಳಲ್ಲಿ ಬಿ ಪಿ ಎಡ್ ಮತ್ತು ಎಂ ಪಿ ಎಡ್ ಪದವಿ ಕೋರ್ಸುಗಳಿಗೆ ಬೇಡಿಕೆ ಇದ್ದು, ಸರ್ಕಾರಿ ಸಂಯೋಜಿತ ಕಾಲೇಜುಗಳಲ್ಲಿ ಬಿ ಪಿ ಎಡ್ ಮತ್ತು ಎಂ ಪಿ ಎಡ್ ಪದವಿ ಕೋರ್ಸುಗಳು ಇಲ್ಲದಿರುವುದರಿಂದ ಈ ಭಾಗದ ವಿದ್ಯಾರ್ಥಿಗಳು ಬಿ ಪಿ ಎಡ್ ಮತ್ತು ಎಂ ಪಿ ಎಡ್ ಕೋರ್ಸ್‌ಗಳನ್ನು ಮಾಡಲು ಖಾಸಗಿ ಕಾಲೇಜುಗಳನ್ನೇ ಅವಲಂಬಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="2">ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬಿಪಿಎಡ್ ಮತ್ತು ಎಂಪಿಎಡ್ ಕೋರ್ಸುಗಳು ಚಾಲ್ತಿಯಲ್ಲಿ ಇರುವುದಿಲ್ಲ.<br><br>ಈ ಕೋರ್ಸ್‌ಗಳನ್ನು ಪ್ರಾರಂಭಿಸಲು National Council for Teacher Education (NCTE) ಇವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ.<br><br>ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಭಾರತಿ ಆವರಣದಲ್ಲಿ ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ಕಾಲೇಜು ಬಿ.ಪಿ.ಎಡ್ 50 ವಿದ್ಯಾರ್ಥಿಗಳು ಮತ್ತು ಎಂ.ಪಿ.ಎಡ್ 40 ವಿದ್ಯಾರ್ಥಿಗಳ ಪ್ರಮಾಣದೊಂದಿಗೆ ಘಟಕ ಕಾಲೇಜಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಸಾಲಿಗೆ ಒಟ್ಟು 49 ಬಿ.ಪಿ.ಇಡಿ ಹಾಗೂ 39 ಎಂ.ಪಿ.ಇಡಿ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದುಕೊಂಡಿರುತ್ತಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ವಿಧಾನಸಭಾ ಕ್ಷೇತ್ರ ಮತ್ತು ರಾಮನಗರ ಜಿಲ್ಲೆ ಹಾಗೂ ಬೆಂಗಳೂರು ನಗರ ವ್ಯಾಪ್ತಿಯ ವಿಜಯನಗರ, ಗೋವಿಂದರಾಜನಗರ, ಮಹಾಲಕ್ಷ್ಮಿ ಲೇಔಟ್, ಟಿ.ದಾಸರಹಳ್ಳಿ, ಯಶವಂತಪುರ, ರಾಜರಾಜೇಶ್ವರಿನಗರ, ಪದ್ಮನಾಭನಗರ, ಆನೇಕಲ್, ಬೊಮ್ಮನಹಳ್ಳಿ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಲೇಜುಗಳು ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವುದರಿಂದ ಈ ಕಾಲೇಜುಗಳಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಬಿ.ಪಿ.ಇಡಿ, ಹಾಗೂ</td></tr>
<tr><td>ಆ)</td><td>ಬೇರೆ ವಿಶ್ವವಿದ್ಯಾಲಯಗಳಲ್ಲಿ ಈ ಪದವಿಗಳು ಇದ್ದರೂ ಸಹ ಅಂತರ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಕೇವಲ ಒಂದು ಸೀಟು ಹಂಚಿಕೆ ಮಾಡುತ್ತಿದ್ದು, ಉಳಿದ ವಿದ್ಯಾರ್ಥಿಗಳಿಗೆ ಪ್ರವೇಶಕ್ಕೆ ಅವಕಾಶವಿಲ್ಲದಿರುವುದರಿಂದಾಗಿ<br>ಇದರಿಂದಾಗಿ ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಪ್ರತಿಭಾವಂತ ಬಡ ವಿದ್ಯಾರ್ಥಿಗಳು ಬಿ ಪಿ ಎಡ್ ಮತ್ತು ಎಂ ಪಿ ಎಡ್ ಕೋರ್ಸುಗಳನ್ನು ಮಾಡಲಾಗದೇ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
</table>

| | | |
|---|---|---|
| | | ಎಂ.ಪಿ.ಇ.ಡಿ. ಕೋರ್ಸಿಗೆ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಯಾವುದೇ ಖಾಸಗಿ ಬಿ.ಪಿ.ಇಡಿ ಹಾಗೂ ಎಂಪಿ.ಇಡಿ ಕಾಲೇಜುಗಳು ಕಾರ್ಯನಿರ್ವಹಿಸುತ್ತಿಲ್ಲ.<br><br>ವಿಶ್ವವಿದ್ಯಾಲಯದಡಿಯಲ್ಲಿ ಬರುವ ಸಂಯೋಜಿತ ಕಾಲೇಜಿನ ವಿದ್ಯಾರ್ಥಿಗಳಿಗೆ ಬಿ.ಪಿ.ಇಡಿ ಮತ್ತು ಎಂ.ಪಿ.ಇಡಿ ವ್ಯಾಸಂಗ ಮಾಡಲು ಮೊದಲ ಪ್ರಾಶಸ್ತ್ಯಯವನ್ನು ನೀಡಲಾಗುತ್ತಿದ್ದು, ಬೆಂಗಳೂರು ವಿಶ್ವವಿದ್ಯಾಲಯ ಹೊರತು ಪಡಿಸಿ ಅನ್ಯ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡಿರುವ ವಿದ್ಯಾರ್ಥಿಗಳಿಗೆ ಬಿ.ಪಿ.ಇಡಿ. ಹಾಗೂ ಎಂ.ಪಿ.ಇಡಿ ಕೋರ್ಸುಗೆ ತಲಾ ಒಂದು ಸೀಟನ್ನು Other university with in Karnataka (OUWK) ಮತ್ತು ಒಂದು ಸೀಟನ್ನು other university outside Karnataka (OUWK) ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಲಾಗುತ್ತಿದೆ.<br><br>ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜಾದ YMCA College of Physical Education ನಲ್ಲಿ ಬಿ.ಪಿ.ಇಡಿ ಕೋರ್ಸನ್ನು ನಡೆಸಲಾಗುತ್ತಿದೆ. |
| ಇ) | ಬಂದಿದ್ದಲ್ಲಿ, ಈ ಕೋರ್ಸುಗಳಿಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿ ಪಿ ಎಡ್ ಮತ್ತು ಎಂ ಪಿ ಎಡ್ ಕೋರ್ಸುಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ; (ಮಾಹಿತಿ ನೀಡುವುದು) | ಎನ್.ಸಿ.ಟಿ.ಇ. ನವದೆಹಲಿ, ಇದರ ಮಾರ್ಗಸೂಚಿಯನುಸಾರ ಬಿ.ಪಿ.ಇಡಿ, ಕಾಲೇಜನ್ನು ಪ್ರಾರಂಭಿಸಲು ಇತರ ಮೂಲ ಸೌಕರ್ಯದೊಂದಿಗೆ ಕನಿಷ್ಠ 5 ರಿಂದ 8 ಎಕರೆ ಜಮೀನು ಹಾಗೂ ಎಂ.ಪಿ.ಇಡಿ ಕಾಲೇಜನ್ನು ಪ್ರಾರಂಭಿಸಲು ಇತರ ಸೌಲಭ್ಯಗಳೊಂದಿಗೆ ಕನಿಷ್ಠ 8 ಎಕರೆ ಜಮೀನು ಮತ್ತು ನಗರ ಪ್ರದೇಶಲ್ಲಿ 200 ಮೀಟರ್ ಟ್ರಾಕ್ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 400 ಮೀಟರ್ ಟ್ರಾಕ್ ಒಳಗೊಂಡಂತೆ ವಿಸ್ತಾರವಾದ ಮೈದಾನವಿರಬೇಕು.<br><br>ಬಿ.ಪಿ.ಇಡಿ / ಎಂ.ಪಿ.ಇಡಿ ಕೋರ್ಸುಗಳನ್ನು ಪ್ರಾರಂಭಿಸಲು ಇದುವರೆವಿಗೂ ಯಾವುದೇ ಪ್ರಸ್ತಾವನೆಗಳು ಇರುವುದಿಲ್ಲ. |

**ಸಂಖ್ಯೆ: ಇಡಿ/ 65 /ಯುಬಿವಿ /2024**

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಇಲಾಖೆ, ಸಚಿವರು.